**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.1145/2025**

**CW- 4** **PW:4**

| | |
|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ ತಳಗೇರಿ |
| ತಂದೆ /ಗಂಡನ ಹೆಸರು | ಃ ಮಲಕಾಜಪ್ಪ |
| ವಯಸ್ಸು | ಃ 34 ವರ್ಷ |
| ಉದ್ಯೋಗ | ಃ ಪೊಲೀಸ್ ಪೇದೆ ನವನಗರ ಪೊಲೀಸ್ ಠಾಣೆ |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **06.08.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೆದ ಎರಡೂವರೆ ವರ್ಷಗಳಿಂದ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಪೊಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 14.06.2025 ರಂದು ಮುಂಜಾನೆ 8 ಗಂಟೆಯಿಂದ ನಾನು ಹಾಗೂ ಚಾಸಾಃ 5 ರವರು ನಮ್ಮ ಠಾಣೆಯ ಚಾಸಾಃ 1 ರವರ ಜೊತೆ ಠಾಣಾ ಹದ್ದಿಯಲ್ಲಿ ಪೆಟ್ರೋಲಿಂಗ ಮಾಡುತ್ತಿದ್ದೆವು. ಮದ್ಯಾಹ್ನ 1.45 ಕ್ಕೆ ನಮ್ಮ ಠಾಣಾ ಹದ್ದಿಯ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಆರೋಪಿಯು ತನ್ನ ಬಳಿ ಸಾರಾಯಿ ತುಂಬಿದ ಟೆಟ್ರಾಪ್ಯಾಕೆಟಗಳನ್ನು ಯಾವದೇ ಪಾಸ್ ವ ಪರ್ಮಿಟ ಇಲ್ಲದೇ ಅನಧಿಕೃತವಾಗಿ ತನ್ನಲ್ಲಿ ಬರುವ ಸಾರ್ವಜನಿಕರಿಗೆ ಮಾರಾಟ ಮಾಡಲು ಇಟ್ಟುಕೊಂಡಿದ್ದಾನೆ ಅಂತಾ ಖಚಿತವಾದ ಬಾತ್ಮಿ ಚಾಸಾಃ 1 ರವರಿಗೆ ಬಂದಿತು. ಖಚಿತವಾಗಿ ಬಂದ ಮಾಹಿತಿಯನ್ನು ನಮಗೆ ತಿಳಿಸಿ ಚಾಸಾಃ 1 ರವರು ಮದ್ಯಾಹ್ನ 2.10 ಕ್ಕೆ ಸರ್ಕಾರದ ತರ್ಫೆ ಒಂದು ದೂರು ನೀಡಿದರು. ಚಾಸಾಃ 8 ರವರು ನನ್ನನ್ನು ಚಾಸಾಃ 1 ಹಾಗೂ 5 ರವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಗಾಮನಗಟ್ಟಿ ಮಾರ್ಗದ ಮುಖಾಂತರ ಮದ್ಯಾಹ್ನ 2.55 ಕ್ಕೆ ಗಾಮನಗಟ್ಟಿ ಕೈಗಾರಿಕಾ ಪ್ರದೇಶದ ಹತ್ತಿರ ಇರುವ ಭೋಟಾ ಧಾಬಾ ಹೊಟೆಲ್ ಹತ್ತಿರ ಸಾರ್ವಜನಿಕ ರಸ್ತೆ ಹತ್ತಿರ ಹೋದೆವು. ನಂತರ ಮದ್ಯಾಹ್ನ 3 ಗಂಟೆಗೆ ಚಾಸಾಃ 8 ರವರು ಇಬ್ಬರು ಪಂಚರಾದ ಚಾಸಾಃ 2 ಮತ್ತು 3

ರವರನ್ನು ಹಾಜರುಪಡಿಸಿಕೊಂಡರು. ಅವರಿಗೆ ರೈಡ್ ವಿಚಾರ ತಿಳಿಸಿದರು. ಛೋಟಾ ಧಾಬಾ ದಾಟಿ ಒಂದು ನಿರ್ಮಾಣ ಹಂತದ ಕಟ್ಟಡ ಇತ್ತು. ನಾವು ಕಂಪೌಂಡ ಒಳಗಡೆ ಅವಿತುಕೊಂಡು ನಿಂತು ವಾಚ್ ಮಾಡುತ್ತಿದ್ದೆವು. ಛೋಟಾ ಧಾಬಾ ಹೊಟೆಲ್ ದಾಟಿ 100 ಮಿ ಅಂತರದಲ್ಲಿ ಒಬ್ಬ ವ್ಯಕ್ತಿ ಬಿಳಿ ಪ್ಲಾಸ್ಟಿಕ ಚೀಲ ಹಿಡಿದುಕೊಂಡಿದ್ದ. ಆತ ಸಾರಾಯಿ ಮಾರುತ್ತಿದ್ದಾನೆ ಅಂತಾ ಸಂಶಯಪಟ್ಟು ಅವನನ್ನು ಘೇರಾಯಿಸಿ ಹಿಡಿದೆವು. ಆಗ ಸಮಯ 3.20 ಆಗಿತ್ತು. ಆತನ ಹೆಸರನ್ನು ಚಾಸಾಃ 8 ರವರು ಕೇಳಿದರು. ಆತ ತಡವರಿಸುತ್ತಾ ತನ್ನ ಹೆಸರನ್ನು ರಮೇಶ ತಂದೆ ಮಲ್ಲಪ್ಪ ಠಾಣೆದ ಅಂತಾ ಹೇಳಿದ. ಆ ಚೀಲದಲ್ಲಿ ಏನಿದೆ ಇಲ್ಲಿ ಏಕೆ ನಿಂತಿದ್ದಿಯಾ ಅಂತಾ ಚಾಸಾಃ 8 ರವರು ಕೇಳಿದರು. ಆಗ ಆವ್ಯಕ್ತಿ ತನ್ನ ಚೀಲದಲ್ಲಿ ಸಾರಾಯಿ ಟೆಟ್ರಾಪ್ಯಾಕಗಳಿವೆ ಅವುಗಳನ್ನು ಮಾರಾಟ ಮಾಡುವ ಸಲುವಾಗಿ ನಿಂತಿದ್ದೇನೆ ಅಂತಾ ಹೇಳಿದ. ಚಾಸಾಃ 8 ರವರು ಆತನಿಗೆ ಅವುಗಳನ್ನು ಎಲ್ಲಿಂದ ತಂದಿದ್ದಿಯಾ ಅವುಗಳ ಬಗ್ಗೆ ಬಿಲ್ಲು ಕೊಡು ಅಂತಾ ಕೇಳಿದರು. ಆಗ ಸದರಿಯವನು ಸಾರಾಯಿ ಕುಡಿಯುವ ಉದ್ದೇಶದಿಂದ ವಿವಿಧ ಬಾರಗಳಿಂದ ಖರೀದಿ ಮಾಡಿಕೊಂಡು ಬಂದಿದ್ದು ಅವುಗಳ ಬಗ್ಗೆ ಯಾವದೇ ಬಿಲ್ಲು ಇಲ್ಲ ಅಂತಾ ಹೇಳಿದ. ಆದರೆ ಆರೋಪಿ ಸಾರ್ವಜನಿಕರಿಗೆ ಮಾರಾಟ ಮಾಡಲು ತಂದಿದ್ದಾನೆ ಅಂತಾ ಗೊತ್ತಾಗಿ ಆ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಒರಿಜಿನಲ್ ಚಾಯ್ಸ ಕಂಪನಿಯ 90 ಎಮ್ ಎಲ್ ನ 28 ಟೆಟ್ರಾಪೌಚಗಳು ಇದ್ದವು. ಹಾಜರಿದ್ದ ಪಂಚರ ಸಮಕ್ಷಮ ಅವುಗಳನ್ನು ಜಪ್ತು ಮಾಡಿಕೊಂಡೆವು.  ನಂತರ ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡುವ ಸಲುವಾಗಿ ಒಂದು ಪ್ರತ್ಯೇಕವಾದ ಪ್ಲಾಸ್ಟಿಕ ಚೀಲದಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಪ್ಯಾಕ ಮಾಡಿದೆವು. ಅವುಗಳ ಮೇಲೆ ನಮ್ಮ ಠಾಣೆಯ ಆಂಗ್ಲ ಬಾಷೆಯ ಸೀಲು ಹಾಕಿದೆವು. ಸದರಿ ಪಂಚನಾಮೆಯನ್ನು ಮದ್ಯಾಹ್ನ 3.25 ರಿಂದ 4.30 ರವರೆಗೆ ಮಾಡಿದೆವು. ಪಂಚನಾಮೆಯನ್ನು ಚಾಸಾಃ 8 ರವರ ಮೌಖಿಕ ಆದೇಶದ ಮೇರೆಗೆ ನಾನೇ ಟೈಪ್ ಮಾಡಿರುತ್ತೇನೆ. ಪೊಟೊಗಳನ್ನು ಚಾಸಾಃ 5 ರವರು ತೆಗೆದಿರುತ್ತಾರೆ. ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ಮತ್ತು 2 ಗಳನ್ನು ನೋಡಿ ಗುರುತಿಸುತ್ತೇನೆ. ನಿಪಿ.2 ರಲ್ಲಿ ನನ್ನ ಸಹಿ ಇದ್ದು ಅದನ್ನು ನೋಡಿ ಗುರುತಿಸುತ್ತಿದ್ದು ನನ್ನ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ನಿಪಿ.3 ಪೊಟೊದಲ್ಲಿ ನಾನು ಲ್ಯಾಪಟಾಪ ಹಿಡಿದುಕೊಂಡಿದ್ದೆ ಆ ಪೊಟೊ ನೋಡಿ

ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಆರೋಪಿ ಪಾಟಿಸವಾಲಿಗೆ ಸಮಯ ಕೋರಿದ್ದು ಯಾವದೇ ಸಕಾರಣ ಇರದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.